ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2095

02. ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು)

03. ಉತ್ತರಿಸುವ ದಿನಾಂಕ : 17.03.2022

04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎ.ಎಸ್.ಐ, ಹೆಚ್.ಸಿ, ಮತ್ತು ಪಿ.ಸಿ ಗಳಿಗೆ ಪ್ರತಿ ವರ್ಷ ಒಂದು ತಿಂಗಳ ವೇತನವನ್ನು ಹೆಚ್ಚುವರಿಯಾಗಿ ನೀಡುತ್ತಿದ್ದು, ಈ ಶ್ರಮದಾಯಕ ಕೆಲಸಗಳನ್ನು ಮಾಡುವ ಸಿಬ್ಬಂದಿಗಳಿಗೆ ಕನಿಷ್ಠ ಎರಡು ತಿಂಗಳ ವೇತನವನ್ನು ನೀಡುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;	ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಚ್.ಸಿ ಮತ್ತು ಪಿ.ಸಿ. ರವರುಗಳಿಗೆ ಪ್ರತಿ ವರ್ಷ 30 ದಿನಗಳ ಹಾಗೂ ಪಿ.ಎಸ್.ಐ ಮತ್ತು ಎ.ಎಸ್.ಐ ರವರುಗಳಿಗೆ 15 ದಿನಗಳ ಪತ್ರಾಂಕಿತ ರಜಾ ವೇತನವನ್ನು ನೀಡಲಾಗುತ್ತಿದೆ. ಸದರಿ ಸಿಬ್ಬಂದಿಗಳಿಗೆ ಎರಡು ತಿಂಗಳ ವೇತನ ಮಂಜೂರು ಮಾಡುವ ಪ್ರಸ್ತಾವನೆ ಇರುವುದಿಲ್ಲ.
ಆ)	ಹೆಚ್.ಸಿ ಮತ್ತು ಪಿ.ಸಿ ಗಳಿಗೆ ಮಾತ್ರವೇ ಪ್ರತಿ ವರ್ಷ ಒಂದು ತಿಂಗಳ ವೇತನವನ್ನು ಹೆಚ್ಚುವರಿಯಾಗಿ ನೀಡುತ್ತಿದ್ದು, ಎ.ಎಸ್.ಐ, ಹುದ್ದೆಯ ಸಿಬ್ಬಂದಿಗಳಿಗೆ ಕೇವಲ 15 ದಿನಗಳ ವೇತನವನ್ನು ಮಾತ್ರವೇ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎ.ಎಸ್.ಐ. ಹುದ್ದೆಯ ಸಿಬ್ಬಂದಿಗಳಿಗೂ ಒಂದು ತಿಂಗಳ ವೇತನ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಎ.ಎಸ್.ಐ ಹುದ್ದೆಯಿಂದ ಎಸ್.ಪಿ (ನಾನ್–ಐಪಿಎಸ್) ಹುದ್ದೆಗಳ ವರೆಗಿನ ಅಧಿಕಾರಿ / ಸಿಬ್ಬಂದಿಯವರುಗಳಿಗೆ 30 ದಿನಗಳ ಪತ್ರಾಂಕಿತ ರಜಾ ವೇತನ ಮಂಜೂರು ಮಾಡುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿ ಇರುವುದಿಲ್ಲ.

HD/49/PPS/2022

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು